ಆಜ್ಞೆಯಲ್ಲಿರುವುದರಿಂದ ಆ ಪ್ರಶ್ನೆ ಬರುವುದಿಲ್ಲ. ಕಂದಾಯ ಇಲಾಖೆಯ ಅಧಿಕಾರಿಗಳು ಆ ಕೆಲಸವನ್ನು ಮಾಡಬೇಕು. ಆದರೆ ಕಂದಾಯ ಇಲಾಖೆಯ ಅಧಿಕಾರಿಗಳು ಆರ್ಜಿ ಬಂದ ಕೂಡಲೇ ಸ್ಥಳ ಅಜಮಾಯಿಷಿ ಮಾಡಿ ನಿಜಾಂಶ ಇದ್ದರೆ ಅಂತಹವರ ಸಾಲವನ್ನು ವಜಾ ಮಾಡುವುದಕ್ಕೆ ಮತ್ತು ಈಗ ಜಪ್ತಿ ವಗೈರೆ ನಡೆಸುತ್ತಿರುವುದನ್ನು ತಪ್ಪಿಸುವುದಕ್ಕೆ ಸರಿಯಾದ ಕ್ರಮವನ್ನು ಸರ್ಕಾರದವರು ಕೈಗೊಳ್ಳುತ್ತಾರೆಯೇ ?

ಶ್ರೀ ಆರ್.ಎಲ್ ಜಾಲಪ್ಪ. —ಇದರ ಬಗ್ಗೆ ಅವಶ್ಯವಾಗಿ ಕ್ರಮ ಕೈಗೊಳ್ಳುತ್ತೇನೆ.

ಶ್ರೀ ಪಿ. ಬೈರೇಗೌಡ —ಇವತ್ತು ಹೊರಡಿಸುತ್ತಿರತಕ್ಕಂತಹ ಆಜ್ಞೆಯಲ್ಲಿ ಕೊಳವೆ ಭಾವಿಗಳೂ ಸೇರಿವೆಯೇ ? ಸೇರದಿದ್ದರೆ, ಕೊಳವೆ ಭಾವಿಗಳಲ್ಲೂ ನೀರು ಬಾರದಿದ್ದಂತಹ ಕಡೆಗಳಲ್ಲಿ ಸರ್ಕಾರ ಏನು ಕ್ರಮ ಕೈಗೊಳ್ಳುತ್ತದೆ ?

ಶ್ರೀ ಆರ್.ಎಲ್. ಜಾಲಪ್ಪ —ಇವತ್ತಿನ ಆಜ್ಞೆ ಹೊರಡಿಸುತ್ತಿರುವುದು ಓಪನ್ ವೆಲ್‌ಗಳಿಗೆ ಸಂಬಂಧಪಟ್ಟಂತೆ ಮಾತ್ರ. ಕೊಳವೆ ಭಾವಿಗಳ ಬಗ್ಗೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯವರ ಜೊತೆಯಲ್ಲಿ ಮಾತನಾಡುತ್ತೇನೆ. ಇದರ ಬಗ್ಗೆಯೂ ತೊಂದರೆಯಾಗಿರುವುದು ನಮ್ಮ ಗಮನಕ್ಕೆ ಬಂದಿದೆ. ಆದರ ಬಗ್ಗೆ ರಿಯಾಯಿತಿಯನ್ನು ಕೊಡಬೇಕಾಗುತ್ತದೆ. ವಿಮರ್ಶೆ ಮಾಡುತ್ತೇನೆ.

ಒಬ್ಬ ಮಾನ್ಯ ಸದಸ್ಯರು — ರೈತರು ತೆಗೆದುಕೊಂಡಿರತಕ್ಕಂತಹ ಸಾಲ ವಸೂಲಿ ಬಗ್ಗೆ ಜಪ್ತಿ ಮತ್ತು ದಿನಕರುಗಳನ್ನು ಹಿಡಿಯುತ್ತಿರುವುದು ಅನೇಕ ಕಡೆಯಲ್ಲಿ ನಡೆಯುತ್ತಿದೆ. ಈ ಬಗ್ಗೆ ಸರ್ಕಾರ ಕೂಡಲೇ ಆ ರೀತಿ ಮಾಡುತ್ತಿರುವುದನ್ನು ನಿಲ್ಲಿಸುವಂತೆ ಸೂಚನೆಯನ್ನು ನೀಡುತ್ತೀರಾ ?

ಶ್ರೀ ಆರ್.ಎಲ್. ಜಾಲಪ್ಪ.—ಇನ್ನು ೩-೪ ದಿವಸಗಳೊಳಗಾಗಿ ಎಲ್ಲ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳಿಗೆ ಈ ಒಂದು ಆಜ್ಞೆ ತಲುಪುತ್ತಿರುವುದರಿಂದ ಆ ಪ್ರಶ್ನೆ ಉದ್ಭವಿಸುವುದಿಲ್ಲ. ಎಲ್ಲಿಯಾದರೂ ಆ ರೀತಿಯ ತೊಂದರೆಯಾದರೆ ತಕ್ಷಣ ನಮ್ಮ ಗಮನಕ್ಕೆ ತನ್ನಿ ಆ ಬಗ್ಗೆ ಸೂಚನೆಯನ್ನು ನೀಡುತ್ತೇನೆ.

ಅಧ್ಯಕ್ಷರು.—ಪ್ರಶ್ನೋತ್ತರ ವೇಳೆ ಮುಗಿಯಿತು. ಇನ್ನು ಮುಂದೆ ಲಿಖಿತ ಮೂಲಕ ನೀಡಲಾಗುವ ಉತ್ತರವನ್ನು ಮಾನ್ಯ ಸಚಿವರು ಸದನದ ಮುಂದೆ ಮಂಡಿಸುತ್ತಾರೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳು ಮತ್ತು ಲಿಖಿತ ಉತ್ತರಗಳು

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—ಲಿಖಿತ ಮೂಲಕ ನೀಡಲಾಗುವ ಉತ್ತರಗಳ ಎರಡನೇ ಪಟ್ಟಿಯನ್ನು ಮಾನ್ಯ ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ಕೋಲಾರ ಜಿಲ್ಲೆಯಲ್ಲಿ ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಸರಬರಾಜು ಮಾಡುವ ಬಗ್ಗೆ

(ಸಿ) ಶ್ರೀ ಜಿ. ಹೆಚ್. ವೆಂಕಟಶಿವರೆಡ್ಡಿ (ಶ್ರೀನಿವಾಸಪುರ).—ಮಾನ್ಯ ವಿದ್ಯುಚ್ಛಕ್ತಿ ಮತ್ತು ಅಬ್ಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳನ್ನು ಉತ್ತರಿಸುವರೇ ?

(ಅ) ಕೋಲಾರ ಜಿಲ್ಲೆಯಲ್ಲಿ ನೀರಾವರಿ ಪಂಪುಸೆಟ್ಟುಗಳನ್ನು ವಿದ್ಯುದ್ದೀಕರಿಸಲು ಬೇಕಾದ ಮೂಲ ಸಾಮಗ್ರಿಗಳನ್ನು (ಕಂಬ, ತಂತಿ ಮುಂತಾದುವುಗಳನ್ನು) ಇಲಾಖೆಯವರು ಒಂದು ವರ್ಷದಿಂದ ಒದಗಿಸಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

(ಆ) ಹಾಗಿದ್ದಲ್ಲಿ, ನೀರಾವರಿ ಪಂಪುಸೆಟ್ಟುಗಳನ್ನು ವಿದ್ಯುದ್ದೀಕರಿಸಲು ಬೇಕಾದ ಸಾಮಗ್ರಿಗಳನ್ನು ಸರಬರಾಜು ಮಾಡಲು ಸರ್ಕಾರವು ಕೈಗೊಂಡಿರುವ ಅಥವಾ ಕೈಗೊಳ್ಳಬೇಕೆಂದಿರುವ ಕಾರ್ಯವೇನು ?